(ದಿನಾಂಕಃ 02.07.2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ವೈ. ಪಿ. ಎಂ ರವರಿಂದ ಃ-**

18. ನಾನು ಫಾರಂ ನಂ 53 ಅನ್ನು ದಾವಾ ಸರ್ವೆ ನಂಬರ್ 1 ಎಕ್ಕರೆಗೆ ಸಲ್ಲಿಸಿರುತ್ತೇನೆ ಎಂದರೆ ಸರಿ. ನಾನು ಈ ದಾವೆಯನ್ನು 1 ಎಕ್ಕರೆಗೆ ಚಕ್ಕುಬಂದಿಯನ್ನು ತೋರಿಸಿ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ನಾನು ಮನೆಗೆ ಹಕ್ಕು ಪತ್ರವನ್ನು ಪಡೆದುಕೊಂಡಿದ್ದು ಅದು ಸಹ ದಾವಾ ಆಸ್ತಿಯಲ್ಲಿ ಬರುತ್ತದೆ.

19. ನಾನು ಹಕ್ಕು ಪತ್ರವನ್ನು ಕಂದಾಯ ಅಧಿಕಾರಿಗಳ ಜೊತೆ ಕೂಡಿಕೊಂಡು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಮನೆ ಮಂಜೂರಾದ ಬಗ್ಗೆ ಅದರ ಮೂಲ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಸಲು ತೊಂದರೆ ಇರುವುದಿಲ್ಲ ಎಂದರೆ ಸರಿ.

20. ನನಗೆ ಪ್ರತಿವಾದಿಗಳು ದಾವಾ ಆಸ್ತಿಗೆ ಯಾವ ದಿಕ್ಕಿನಿಂದ ತೊಂದರೆ ಕೊಟ್ಟಿರುತ್ತದೆ ಎಂದು ಹೇಳಲು ಬರುತ್ತದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ತನ್ನ ಕತ್ತನ್ನು ಅಲ್ಲಾಡಿಸುವ ಮೂಲಕ ಬರುವುದಿಲ್ಲ ಎಂದು ನುಡಿಯುತ್ತಾರೆ.

21. 2 ನೇ ಪ್ರತಿವಾದಿಗೆ ದಾವಾ ಸರ್ವೆ ನಂ 65 ರಲ್ಲಿ ಮನೆಗೆ ಸಂಬಧಪಟ್ಟಂತೆ ಹಕ್ಕು ಪತ್ರ ಪೂರ್ವ ಪಶ್ಚಿಮ 50 ಅಡಿ ಉತ್ತರ ದಕ್ಷಿಣ 80 ಅಡಿ ನೀಡಿರುತ್ತಾರೆ ಎಂದರೆ ಸಾಕ್ಷಿಯು ಅಲ್ಲಿ ಪ್ರತಿವಾದಿ 2 ರವರ ಮನೆ ಇರುವುದಿಲ್ಲ. ಸಾಕ್ಷಿಯು ಸ್ವ ಇಚ್ಚೆಯಿಂದ ಮುಂದುವರಿದು ನನ್ನ ಮನೆಗೂ ಮತ್ತು ಪ್ರತಿವಾದಿ 2 ರವರ ಮನೆಗೂ 2 ಕಿ.ಮೀ ದೂರು ಇರುತ್ತದೆ ಎಂದು ನುಡಿಯುತ್ತಾರೆ.

22. ನಾನು ಈ ದಾವೆಯಲ್ಲಿ ಪ್ರತಿವಾದಿ 2 ರವರ ಜಮೀನನ್ನು ಸೇರಿಸಿಕೊಂಡು ಚಕ್ಕುಬಂದಿಯನ್ನು ತೋರಿಸಿ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯಲ್ಲಿ ಸ್ವಾಧೀನವನ್ನು ಹೊಂದಿರುವುದಿಲ್ಲ ಪ್ರತಿವಾದಿಗಳು ದಾವಾ ಸ್ವಾಧೀನದಲ್ಲಿ

ಇರುತ್ತಾರೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯಲ್ಲಿ ಮನೆ ಇರುತ್ತದೆ ಎಂದು ತೋರಿಸಲು ಮನೆಗೆ ಸಂಬಂಧಪಟ್ಟಂತೆ ಪೋಟೋಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ.

23. ಸರ್ವೆ ನಂ 65 ರಲ್ಲಿರುವ ನನ್ನ ಸ್ವಾಧೀನದಲ್ಲಿರುವ 1 ಎಕರೆ ಜಮೀನಿಗೆ ಇರುವ ಚಕ್ಕುಬಂದಿ ಪೂರ್ವಕ್ಕೆ ಮತ್ತು ಪಶ್ಚಿಮಕ್ಕೆ ಸರ್ವೆ ನಂ 65 ಮತು ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಸರ್ವೆ ನಂಬರ್ 65 ಬರುತ್ತದೆ. ನಾನು ಕೇವಲ 15 ಗುಂಟೆ ಜಮೀನು ಸರ್ವೆ ನಂ 65 ರಲ್ಲಿ ಹೊಂದಿದ್ದು ಆದರೆ ಸರ್ವೆ ನಂ 65 ರಲ್ಲಿ 1 ಎಕರೆ ಜಮೀನಿನ ಸುಳ್ಳು ಚಕ್ಕುಬಂದಿಯನ್ನು ಪ್ರತಿವಾದಿಯವರ ಜಮೀನನ್ನು ತೋರಿಸಿ ಪ್ರತಿವಾದಿಯವರ ಜಮೀನನ್ನು ಒತ್ತುವರಿ ಮಾಡಲು ಪ್ರಯತ್ನಿಸುತ್ತಿದ್ದೇನೆ ಎಂದರೆ ಸರಿಯಲ್ಲ.

24. ನನಗೆ ಪ್ರತಿವಾದಿಗಳು ಯಾವ ದಿನಾಂಕದಂದು ತೊಂದರೆ ಕೊಟ್ಟಿರುತ್ತಾರೆ ಎಂದು ಹೇಳಲು ಬರುವುದಿಲ್ಲ. ನಾನು ಪ್ರತಿವಾದಿಯವರು ಜಮೀನನ್ನು ಒತ್ತುವರಿ ಮಾಡಲು ಪ್ರಯತ್ನಿಸಿದ್ದರಿಂದ ಪ್ರತಿವಾದಿಯವರು ನನ್ನ ವಿರುದ್ಧ ರಿಪ್ಪನ್ ಪೇಟೆ ಪೊಲಿಸ್ ಠಾಣೆಯಲ್ಲಿ ದೂರನ್ನು ದಾಖಲಿಸಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಪ್ರತಿವಾದಿಯವರು ನನ್ನ ಜಮೀನಿನಲ್ಲಿರುವ ಶುಂಠಿಯನ್ನು ನೆಡಿಸುತ್ತಿದ್ದರಿಂದ(ನಾಟಿ ಮಾಡುತ್ತಿತುವುದರಿಂದ) ಪ್ರತಿವಾದಿಗಳೇ ನನ್ನ ಮೇಲೆ ದೂರನ್ನು ದಾಖಲಿಸಿರುತ್ತಾರೆ ಎಂದು ನುಡಿಯುತ್ತಾರೆ.

25. ನನಗೆ ಪ್ರತಿವಾದಿಗಳು ಯಾವತ್ತೂ ತೊಂದರೆ ಕೊಟ್ಟಿರುವುದಿಲ್ಲ ಆದರೂ ನಾನು ಪ್ರತಿವಾದಿಗಳಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಮನೆಗೆ ಸಂಬಂಧಪಟ್ಟಂತೆ ಹಕ್ಕು ಪತ್ರ ಕೊಟ್ಟಿರುವುದಿಲ್ಲ ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

26. ನಾನು ಪ್ರತಿವಾದಿಗಳಿಗೆ ಸಂಬಂಧಪಟ್ಟ 80 ಕಲ್ಲು ಕಂಬಗಳನ್ನು ಒಡೆದು ತೊಂದರೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯವರಿಗೆ ಸೇರಿದ ಸರ್ವೆ ನಂ 71 ರಲ್ಲಿ ಒತ್ತುವರಿ ಮಾಡಿದ ಜಮೀನು ಸರ್ವೆ ನಂ 65 ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು

ಸ್ವ ಇಚ್ಚೆಯಿಂದ ಮುಂದುವರಿದು ನಮ್ಮ ಸರ್ವೆ ನಂಬರ್ ಮತ್ತು ಪ್ರತಿವಾದಿಯವರು ಸರ್ವೆ ನಂಬರ್ 2 ಕಿ.ಮೀ ದೂರು ಇರುತ್ತದೆ ಎಂದು ನುಡಿಯುತ್ತಾರೆ.

27. ಪ್ರತಿವಾದಿಗಳು ತಮ್ಮ ಮೂಲ ಜಮೀನಾದ ಸರ್ವೆ ನಂ 71 ಕ್ಕೆ ಸರ್ವೆ ನಂ 65 ರ ಮೂಲಕ ಹೊಗಬೇಕಾಗುತ್ತದೆ ಎಂದರೆ ಸರಿಯಲ್ಲ. ನಾನು ಸತ್ಯಾಂಶಗಳನ್ನು ನ್ಯಾಯಾಲಯದ ಮುಂದೆ ಮುಚ್ಚಿಟ್ಟು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

28. ನಾನು ಈ ದಾವೆಯೊಂದಿಗೆ ಹಾಜರುಪಡಿಸಿದ ದಾಖಲಾತಿಗಳು 1 ಎಕ್ಕರೆಗೆ ಸಂಬಂಧಪಟ್ಟಿರುತ್ತವೆ. 15 ಗುಂಟೆಗೆ ಸಂಬಂಧಪಟ್ಟಿರುವುದಿಲ್ಲ. ನಾನು 1 ಎಕರೆ ಜಮೀನಿಗೆ ಆದೇಶ ಪಡೆದುಕೊಂಡು ಪ್ರತಿವಾದಿಯವರ ಜಮೀನಿಗೆ ಹೊಗಲು ತೊಂದರೆ ಕೊಡುವ ಉದ್ದೇಶದಿಂದ ಈ ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇರುವುದಿಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಎಂ. ಒ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.